11) ಸರ್ಕಾರಿ ಪ್ರೌಢಶಾಲೆ ಎ.ಕೆ.ಸಲಗರ

12) ಸರ್ಕಾರಿ ಪ್ರೌಢಶಾಲೆ ಮುದ್ದಡಗಾ

13) ಸರ್ಕಾರಿ ಪ್ರೌಢಶಾಲೆ, ಆಂಬಲಗಾ

14) ಸರ್ಕಾರಿ ಪ್ರೌಢಶಾಲೆ ಬೋಧನ

15) ಸರ್ಕಾರಿ ಪ್ರೌಢಶಾಲೆ ಕಮಲಾನಗರ

16) ಸರ್ಕಾರಿ ಪ್ರೌಢಶಾಲೆ ಚಿಂಚನಸೂರ

17) ಸರ್ಕಾರಿ ಪ್ರೌಢಶಾಲೆ ನರೋಣಾ

18) ಸರ್ಕಾರಿ ಪ್ರೌಢಶಾಲೆ ಕಿಣ್ಣಿಸುಲ್ತಾನ

ಆ) 12 ಪ್ರೌಢಶಾಲೆಗಳಿಗೆ ಸ್ವಂತ ಕಟ್ಟಡ ಸೌಲಭ್ಯವಿದೆ. 06 ಪ್ರೌಢಶಾಲೆಗಳಿಗೆ ಕಟ್ಟಡ ಸೌಲಭ್ಯವಿರುವುದಿಲ್ಲ.

ಇ) ಅನುದಾನ ಬಿಡುಗಡೆಯಾದಂತೆ ಹಂತ ಹಂತವಾಗಿ ಕಟ್ಟಡ ಸೌಲಭ್ಯ ಕಲ್ಪಿಸಿಕೊಡಲು ಕ್ರಮ ತೆಗೆದುಕೊಳ್ಳಲಾಗುವುದು.

ಕಮಲಾಪುರ ಕ್ಷೇತ್ರ ಜಿಲ್ಲಾ ಪಂಚಾಯತಿ ರಸ್ತೆಗಳ ದುರಸ್ತಿ.

218(432)

ಶ್ರೀ ರೇವು ನಾಯಕ್ ಬೆಳಮಗಿ (ಕಮಲಪೂರ್): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಗುಲ್ಬರ್ಗಾ ಜಿಲ್ಲೆಯ ಕಮಲಾಪುರ ಕ್ಷೇತ್ರದಲ್ಲಿ ಬರುವ ಜಿಲ್ಲಾ ಪಂಚಾಯತಿ ರಸ್ತೆಗಳು ತೀರಾ ಹದಗೆಟ್ಟಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೆ?

2. ಖಜೂರಿ, ಬಾರ್ಡರ್‌ನಿಂದ ಹುದಲೂರು ರಸ್ತೆ ಹಾಗೂ ಆಳಂದಿಂದ ನಿರಗೂಡಿ ರಸ್ತೆ ಹಾಗೂ ಕಮಲಾಪುರದಿಂದ ಜಿವಣಗಿಗೋಗಿ ರಸ್ತೆ ಮತ್ತು ಡೊಂಗರಗಾಂವ್‌ದಿಂದ ಕಾಳಮಗಿರಿ ರಸ್ತೆಗಳು ಹಾಗೂ ಅನೇಕ ಹಳ್ಳಿಯಲ್ಲಿ ಇನ್ನು ಬಹಳಷ್ಟು ರಸ್ತೆಗಳು ಹದಗೆಟ್ಟಿದ್ದು ದುರಸ್ತಿ ಕಾರ್ಯವನ್ನು ಎಂದು ಕೈಗೆತ್ತಿಕೊಳ್ಳಲಾಗುವುದು?

Sri M.Y.GHORPADE (Minister for Rural Development & Panchayat Raj):

1. ಗಮನಕ್ಕೆ ಬಂದಿದೆ.

2. ಖಜೂರಿ, ಬಾರ್ಡ್‌ರ್‌ನಿಂದ ಹುದಲೂರು ರಸ್ತೆ ನಿರ್ವಹಣೆಯನ್ನು ಪ್ರಸಕ್ತ ಸಾಲಿನ 3054 ಗ್ರಾಮೀಣ ಸಂಪರ್ಕ ಲೆಕ್ಕ ಶೀರ್ಷಿಕೆಯಡಿಯಲ್ಲಿ ತೆಗೆದುಕೊಂಡು 2.00 ಕಿಮೀ. ರಸ್ತೆ ದುರಸ್ತಿ ಮಾಡಲಾಗಿದೆ. ಆಳಂದ ನಿರಗೂಡಿ ರಸ್ತೆ ಒಟ್ಟು 14 ಕಿಮೀ ಇದ್ದು ಈ ವರ್ಷದ ಅತಿವೃಷ್ಟಿ ಯೋಜನೆಯಲ್ಲಿ 1.00 ಕಿಮೀ ದುರಸ್ತಿ ಕೈಗೆತ್ತಿಕೊಳ್ಳಲಾಗಿದೆ. ಅಲ್ಲದೆ ರೂ. 100.00 ಲಕ್ಷ (ಪ್ರತಿ ತಾಲ್ಲೂಕಿಗೆ) ಗ್ರಾಮೀಣ ಸಂಪರ್ಕ ಜಾಲ ಅಭಿವೃದ್ಧಿ ಯೋಜನೆ ಅಡಿಯಲ್ಲಿ ಕಿಮೀ 11.50 ರಿಂದ 12.50 ವರೆಗೆ ಡಾಂಬರೀಕರಣ ಮಾಡಲಾಗಿದೆ. ಉಳಿದ ರಸ್ತೆಯನ್ನು ಮುಂದಿನ ವರ್ಷದ ಕ್ರಿಯಾ ಯೋಜನೆಯಲ್ಲಿ ಅಳವಡಿಸಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು. ಗುಲ್ಬರ್ಗಾ ತಾಲ್ಲೂಕಿನ ಡೊಂಗರಗಾಂವ್‌ದಿಂದ ಕಾಳ ಮಂದರಗಿ-ಕಮಲಾಪುರದಿಂದ ಜಿವಣಗಿ-ಗೋಗಿ ರಸ್ತೆಗಳ ತಾತ್ಕಾಲಿಕ ದುರಸ್ತಿ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದೆ. ಉಳಿದ ರಸ್ತೆಗಳ ಕೆಲಸವನ್ನು ಮುಂದಿನ ಕ್ರಿಯಾ ಯೋಜನೆಯಲ್ಲಿ ಅಳವಡಿಸಿ ಕೈಗೆತ್ತಿಕೊಳ್ಳಲಾಗುವುದು.

ಕಮಲಾಪುರ ಕ್ಷೇತ್ರದಲ್ಲಿರುವ ಪದವಿ ಪೂರ್ವ ಕಾಲೇಜುಗಳ ಕುರಿತು.

219(433)

ಶ್ರೀ ರೇವು ನಾಯಕ್ ಬೆಳಮಗಿ(ಕಮಲಾಪುರ್): ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಗುಲ್ಬರ್ಗಾ ಜಿಲ್ಲೆಯ ಕಮಲಾಪುರ ಮೀಸಲು ಕ್ಷೇತ್ರದಲ್ಲಿ ಎಷ್ಟು ಪದವಿ ಪೂರ್ವ ಕಾಲೇಜುಗಳು ಇವೆ?

ಆ. ಈ ಕಾಲೇಜುಗಳಲ್ಲಿ ಪೀಠೋಪಕರಣಗಳನ್ನು ಒದಗಿಸಲಾಗಿದೆಯೇ? ಎಷ್ಟು ಕಾಲೇಜುಗಳಿಗೆ ಒದಗಿಸಬೇಕಾಗಿದೆ.

ಇ. ಈ ಕಾಲೇಜುಗಳಲ್ಲಿ ಎಷ್ಟು ಜನ ಉಪನ್ಯಾಸಕರುಗಳ ಕೊರತೆ ಇದೆ. ಯಾವಾಗ ಭರ್ತಿ ಮಾಡಲಾಗುವುದು?

ಶ್ರೀ ಹೆಚ್.ವಿಶ್ವನಾಥ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು):